ಇಂದು ದಿಃ**30-06-2026** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಹೆಚ್ ಎಂ ಎಸ್ ವಕೀಲರಿಂದ ವಾದಿಗಳ ಪರಃ**

ವಾದಿ ತಮ್ಮ ವೈದ್ಯಕಿಯ ಶಿಕ್ಷಣವನ್ನು ಪೂರೈಯಿಸಿದ ನಂತರ ತಮ್ಮ ವೃತ್ತಿಯನ್ನು ಐಟಂ ನಂಬರ್ 1 ಆಸ್ತಿಯಲ್ಲಿ ಶುರುಮಾಡಿದನು ಎಂದರೆ ಸರಿ. ವಾದಿ, ನಾನು, ನನ್ನ ಉಳಿದ ಸಹೋದರ ಮತ್ತು ಸಹೋದರಿಯರು ಮತ್ತು ನನ್ನ ತಂದೆ ಈ ಐಟಂ ನಂಬರ್ 1 ರ ಆಸ್ತಿಯಲ್ಲಿ ವಾಸ ಇದ್ದೇವು ಎಂದರೆ ಸಾಕ್ಷಿ ವಾದಿ ಕಿರ್ಲೋಸ್ಕರ ಕಂಪನೀಯವರು ನೀಡಿದ ವಸತಿ ಗೃಹದಲ್ಲಿ ಇರುತ್ತಿದ್ದರು, ವೈದ್ಯಕೀಯ ವೃತ್ತಿ ಮಾತ್ರ ಐಟಂ ನಂಬರ್ 1 ಆಸ್ತಿಯಲ್ಲಿ ಮಾಡುತ್ತಿದ್ದರು ಎಂದು ಹೇಳುತ್ತಾರೆ. ಗಂಡು ಮಕ್ಕಳ ಪೈಕಿ ನನ್ನ ತಂದೆಯ ನಂತರ ಹಿರಿಯವರು ಎಂದರೆ ವಾದಿ ಎಂದರೆ ಸರಿ. ವಾದಿ ತನ್ನ ಆದಾಯದಿಂದ ಕುಟುಂಬದ ನಿರ್ವಹಣೆಯ ಖರ್ಚು, ಸಹೋದರಿಯರ ಮದುವೆಯ ಖರ್ಚುಗಳನ್ನು ಸಹ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ, ವಾದಿ ವೈದ್ಯಕೀಯ ವೃತ್ತಿಗೆ ಬಂದಾಗ ಸ್ವಯಂ ನಿವೃತ್ತಿ ಆಗಲೇ ಪಡೆದಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಇನ್ನು ನನ್ನ ತಂದೆ ಕೆಲಸಕ್ಕೆ ಹೋಗುತ್ತಿದ್ದರು ಎಂದು ಹೇಳುತ್ತಾರೆ. ನನ್ನ ತಂದೆಗೆ ಕಡಿಮೆ ಸಂಬಳ ಇತ್ತು ಎಂದರೆ ಸರಿಯಲ್ಲ. ಸಾಕ್ಷಿ ಓವರ್ ಟೈಮ್ ಮಾಡುತ್ತಿದ್ದರು ಎಂದು ಹೇಳುತ್ತಾರೆ. ಈ ವಿಷಯವನ್ನು ನನ್ನ ಪ್ರತಿವಾದ ಪತ್ರದಲ್ಲಿ ಮತ್ತು ಸಾಕ್ಷಿ ಪ್ರಮಾಣಪತ್ರದಲ್ಲಿ ತಿಳಿಸಿಲ್ಲ. ವಾದಿ ಹೊರತುಪಡಿಸಿ ನನ್ನ ಇನ್ನು ಮೂರು ಜನ ಸಹೋದರರಲ್ಲಿ ಒಬ್ಬರು ಭದ್ರಾವತಿಯಲ್ಲಿ ವೈದ್ಯರು ಮತ್ತು ಇನ್ನು ಇಬ್ಬರು ಇಂಜನೀಯರ್ ಇರುತ್ತಾರೆ. ನನ್ನ ಉಳಿದ ಸಹೋದರರ ವಿದ್ಯಾಭ್ಯಾಸದ ಖರ್ಚ್ ನ್ನು ಸಹ ವಾದಿಯೇ ನೋಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ನನ್ನ ಮದುವೆ 1996 ರಲ್ಲಿ ಆಗಿರುತ್ತದೆ. ನನ್ನನ್ನು ಬೆಂಗಳೂರಿಗೆ ಮದುವೆ ಮಾಡಿಕೊಟ್ಟಿದ್ದರು. ನನ್ನ ಗಂಡ ಔಷದೀಯ ಕಂಪನಿಯರಲ್ಲಿ ಪ್ರೊಡೆಕ್ಷನ್ ಮೇನಜರ್ ಎಂದು ಕೆಲಸ ಮಾಡುತ್ತಾರೆ. 1996 ರಿಂದ 2001 ರವರೆಗೆ ನಾನು ಬೆಂಗಳೂರಿನಲ್ಲಿ ನನ್ನ ಗಂಡನ ಜೊತೆಗೆ ಸಂಸಾರ ಮಾಡಿರುತ್ತೇನೆ. ನನ್ನ ಮತ್ತು ನನ್ನ ಗಂಡನ ನಡುವೆ ಮನಸ್ತಾಫ ಇದ್ದು, ದಾವಣಗೆರೆಯ ಕೌಟಂಬಿಕ ನ್ಯಾಯಾಲಯದಲ್ಲಿ ವ್ಯಾಜ್ಯ ನಡೆಯುತ್ತಿದ್ದೆ. ನನ್ನ ತಂದೆ ಇದ್ದಾಗಲೇ ವಾದಿ ನನ್ನ ಸಂಸಾರವನ್ನು ಸರಿ ಮಾಡುವ ಪ್ರಯತ್ನ ಮಾಡಿದ್ದರು ಎಂದರೆ ಸಾಕ್ಷಿ ಎಲ್ಲರೂ ಒಂದು ಸಲ ಬಂದಿದ್ದರು ಎಂದು ಹೇಳುತ್ತಾರೆ. ವಾದಿ ನನ್ನ ಸಂಸಾರ ಸರಿ ಇಲ್ಲದೇ ಇರುವ ಕಾರಣ, ನನ್ನ ಖರ್ಚು ವೆಚ್ಚಕ್ಕೆ ಬಹಳ ಸಲ ಸಹಾಯ ಮಾಡಿದ್ದಾನೆ ಎಂದರೆ ಸರಿಯಲ್ಲ.

ನನ್ನ ತಂದೆಗೆ ವಾದಿ ಸಣ್ಣ ವಯಸ್ಸಿನಲ್ಲಿ ವಿದ್ಯಾಭ್ಯಾಸ ಮಾಡಿ, ವೈದ್ಯ ಆದನು ಎಂದು ಬಹಳ ಪ್ರೀತಿ ವಿಶ್ವಾಸ ಇತ್ತು ಎಂದರೆ ಸರಿ. ಆ ಪ್ರೀತಿ ವಿಶ್ವಾಸದಿಂದ ನನ್ನ ತಂದೆ ಐಟಂ ನಂಬರ್ 1 ಆಸ್ತಿಯನ್ನು ವಾದಿಗೆ ದಾನಪತ್ರ ಮಾಡಿಕುಟ್ಟಿದ್ದರು ಎಂದರೆ ಗೊತ್ತಿಲ್ಲ. ನಾನು ಬೆಂಗಳೂರು ಬಿಟ್ಟು ಹರಿಹರಕ್ಕೆ ವಾಸ ಇರಲು ಬರುವ ಮೊದಲೇ ನನ್ನ ತಂದೆ ವಾದಿಯ ಹೆಸರಿಗೆ ದಾನಪತ್ರ ಮಾಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿ 2013 ರಲ್ಲಿ ಮಾಡಿದ್ದರು ಎಂದು ಹೇಳುತ್ತಾರೆ. ದಾನಪತ್ರ ಮಾಡುವುದು ಎಂದರೆ ಯಾರಿಗೆ ದಾನ ಮಾಡಿಕೊಡುತ್ತಾರೆ ಅವರಿಗೆ ದಾಖಲೆ ಮತ್ತು ಆಸ್ತಿ ಕೊಡುತ್ತಾರೆ ಎಂದರೆ ಸರಿ. 2014 ರಲ್ಲಿ ನನ್ನ ತಂದೆ ದಾನಪತ್ರ ಮಾಡಿಕೊಟ್ಟ ಆಸ್ತಿಯ ಸ್ವಾಧೀನವನ್ನು ವಾದಿಯಿಂದ ಪಡೆದರು. ದಾನಪತ್ರ ಆಗಿದ್ದನು ಮತ್ತು ಸ್ವಾಧೀನ ತೆಗೆದುಕೊಂಡಿರುವುದನ್ನು ನಾನು ನೋಡಿರುತ್ತೇನೆ. ಸಾಕ್ಷಿ ಪುನಃ ನಾನು ಇರಲಿಲ್ಲ ಎಂದು ಹೇಳುತ್ತಾರೆ.

ನನ್ನ ತಂದೆ ಐಟಂ ನಂಬರ್ 1 ಆಸ್ತಿಯ ಸ್ವಾಧೀನವನ್ನು ವಾದಿಯಿಂದ

ಯಾವತ್ತೂ ಪಡೆದಿಲ್ಲ ಎಂದರೆ ಗೊತ್ತಿಲ್ಲ. ನಾನು ಹರಿಹರಕ್ಕೆ ವಾಪಸ್ಸು ಬಂದ ನಂತರ ನನ್ನ ತಂದೆಗೆ ನನ್ನ ಸಂಸಾರ ಸರಿ ಇಲ್ಲ, ಯಾವುದಾದರೂ ಆಸ್ತಿ ನನ್ನ ಹೆಸರಿಗೆ ಮಾಡಿಕೊಡಿ ಎಂದು ಪ್ರತಿದಿನ ಅವರಿಗೆ ಹಿಂಸೆ ಕೊಡುತ್ತಿದ್ದನೊ ಎಂದರೆ ಸರಿಯಲ್ಲ. ಆ ಕಾರಣದಿಂದ ನನ್ನ ತಂದೆ ವಾದಿಗೆ ಆಸ್ತಿ ನೀನು ಇಟ್ಟುಕೋ, ಹೆಸರಿಗೆ ಮಾತ್ರ ನನ್ನ ಹೆಸರಿಗೆ ಒಂದು ದಾಖಲೆ ಮಾಡಿಕೊಡುತ್ತೇನೆ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ಆ ಕಾರದಿಂದ ನನ್ನ ಹೆಸರಿಗೆ ಒಂದು ದಾನಪತ್ರ ಸೃಷ್ಠಿ ಆಯಿತು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನ್ನ ತಂದೆಗೆ ಆಗಲೇ ವಯಸ್ಸು ಆಗಿ, ಆತನಿಗೆ ದಾನಪತ್ರ ಮಾಡಿಕೊಡುವಷ್ಟು ಚೈತನ್ಯ ಸಹ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಹೆಸರಿಗೆ ದಾನಪತ್ರ ಆಗುವ ಸಮಯದಲ್ಲಿ ನಾನು, ನನ್ನ ತಂದೆ, ವೇದಮೂರ್ತಿ ಮತ್ತು ಸೋಮಶೇಖರ ಎಂಬ ಸಾಕ್ಷಿದಾರರು ಇದ್ದರು. ವೇದಮೂರ್ತಿ ಮತ್ತು ಸೋಮಶೇಖರ ಜೀವಂತ ಇದ್ದಾರೆ. ಅವರ ಸಾಕ್ಷಿ ಮಾಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿ ಅವರು ಬರುವುದಿಲ್ಲ ಎಂದು ಹೇಳಿದ್ದಾರೆ ಎಂದು ಹೇಳುತ್ತಾರೆ. ವೇದಮೂರ್ತಿ ಮತ್ತು ಸೋಮಶೇಖರ ಇವರಿಗೆ ನನ್ನ ತಂದೆ ಮತ್ತು ವಾದಿಯ ನಡುವೆ ಆದ ಎಲ್ಲಾ ವಿಚಾರಗಳ ಮಾಹಿತಿ ಇರುವ ಕಾರಣ, ಅವರು ಸಾಕ್ಷಿ ಹೇಳಲು ಬರುವುದಿಲ್ಲ ಎಂದು ಹೇಳಿದ್ದಾರೆ ಎಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ.

ನನ್ನ ತಂದೆ 2016 ರಲ್ಲಿ ತೀರಿಕೊಂಡರು. 2016 ರವರೆಗೆ ನನ್ನ ತಂದೆ ಮತ್ತು ವಾದಿಯ ನಡುವಿನ ಸಂಬಂಧ ಬಹಳ ಚೆನ್ನಾಗಿ ಇತ್ತು ಎಂದರೆ ಸರಿ. ನನ್ನ ತಂದೆ ತೀರಿಕೊಳ್ಳುವ ಮೊದಲು ವಾದಿ ಬೇರೆ ಕಡೆಗೆ ಬೇಜಾರು ಆಗಿ ಕೆಲಸ ಮಾಡುತ್ತಿದ್ದಾಗ, ನನ್ನ ತಂದೆ ಬೇರೆ ಕಡೆಗೆ ಏಕೆ ಮಾಡುತ್ತೀಯಾ ನಾನು ಆಸ್ತಿ ಮಾಡಿಕೊಡುತ್ತೇನೆ ಎಂದು ದಾನ ಮಾಡುತ್ತೇನೆ ಎಂದು ಪತ್ರ ವ್ಯವಹಾರ ಸಹ ಮಾಡಿದ್ದರು ಎಂದರೆ ಗೊತ್ತಿಲ್ಲ. ನನ್ನ ತಂದೆಗೆ ಆತ ತೀರಿಕೊಳ್ಳುವ ಪೂರ್ವದಲ್ಲಿ

ಅಪಘಾತ ಆಗಿತ್ತು ಎಂದರೆ ಸರಿ. ವಾದಿ ಆ ಸಮಯದಲ್ಲಿ ಪೋಲೀಸ್ ಪಿರ್ಯಾದಿ, ವೈದ್ಯಕೀಯ ಖರ್ಚು ಕೊಡುವುದು ಇದನ್ನು ಮಾಡಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಯ ಚಿಕಿತ್ಸೆಗೆ ಸುಮಾರು ರೂ.15 ಲಕ್ಷ ಖರ್ಚು ಆಗಿತ್ತು ಎಂದರೆ ಇರಬಹುದು. ನನ್ನ ತಂದೆಗೆ ಆದ ಗಾಯಗಳ ಕುರಿತು ಎಂ.ವಿ.ಸಿ ನಂಬರ್ 186/2014 ನ್ನು ನಾವೆಲ್ಲರೂ ಸೇರಿ ಇದೇ ನ್ಯಾಯಾಲಯದಲ್ಲಿ ದಾಖಲು ಮಾಡಿದ್ದೇವು ಎಂದರೆ ಸಾಕ್ಷಿ ನನ್ನ ಸಹಿ ಮಾತ್ರ ವಾದಿ ಪಡೆದಿದ್ದರು ಎಂದು ಹೇಳುತ್ತಾರೆ. ಸದರಿ ಕ್ಲೇಮ್ ಅರ್ಜಿಯಲ್ಲಿ ವಾದಿ ವೈದ್ಯಕೀಯ ಖರ್ಚು ವೆಚ್ಚಿನ ದಾಖಲೆಗಳನ್ನು ಆತನೇ ಹಾಜರುಪಡಿಸಿದ್ದು ಎಂದರೆ ಸರಿ. ಆತನೇ ಸಾಕ್ಷಿ ಹೇಳಿದ್ದರು ಎಂದರೆ ಸರಿ. ವಾದಿ ನಮ್ಮೆಲ್ಲರ ಪರವಾಗಿ ಅವರಿಗೆ ಕೊಟ್ಟ ಅಧಿಕಾರದ ಪ್ರಕಾರ ಸಾಕ್ಷಿ ಹೇಳಿದ್ದರು ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ ವಾದಿಯರ ಪರ ವಕೀಲರು ಸಮಯಕೇಳಿದ್ದು, ನೀಡಲಾಯಿತು.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.